# ನಾದಯೋಗಿ ಸಂತ ತ್ಯಾಗರಾಜರು

**ರೂಪಶ್ರೀ ನಾಗರಾಜ್**

ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ಸಂತ ತ್ಯಾಗರಾಜರು ನಾದೋಪಾಸನೆಯನ್ನೇ ಉಸಿರಾಗಿಸಿಕೊಂಡ ಸಂತಶ್ರೇಷ್ಠರು. ಅವರ ಆಧ್ಯಾತ್ಮಿಕ ಹಾಗೂ ಕಲಾಜೀವನದ ಪರಿಚಯವನ್ನಿಲ್ಲಿ ಮಾಡಿಕೊಡಲಾಗಿದೆ. ಲೇಖಕಿ ಕನ್ನಡ ಸಾಹಿತ್ಯ ಹಾಗೂ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರರು. ಸಂಗೀತ, ಗಮಕ, ಸಾಹಿತ್ಯವೇ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆ ಮಾಡಿರುವ ಅವರು ಆಕಾಶವಾಣಿಯಲ್ಲಿ ಹವ್ಯಾಸಿ ಕಲಾವಿದರು. ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

'ಸೀತಮ್ಮ ಮಾಯಮ್ಮ ಶ್ರೀರಾಮುಡು ಮಾ ತಂಡ್ರಿ.. ವರ ತ್ಯಾಗರಾಜುನಿಕಿ ಪರಮ ಬಾಂಧವುಲು ಮನಸಾ....'

'ಜಗನ್ಮಾತೆ ಸೀತೆಯೇ ತಾಯಿ, ಶ್ರೀರಾಮಚಂದ್ರನೇ ತಂದೆ, ಅವರ ಬಂಧುಗಳೆಲ್ಲರೂ ತ್ಯಾಗರಾಜನ ಪರಮಾಪ್ತ ಬಾಂಧವರು..' ಎಂದು ತಮ್ಮ ಆರಾಧ್ಯದೈವ ಶ್ರೀರಾಮಚಂದ್ರನ ಇಡೀ ಕುಟುಂಬದ ಚಿತ್ರಣವನ್ನು ನಮ್ಮೆದುರು ತಂದು ನಿಲ್ಲಿಸಿ, ನಮ್ಮನ್ನು ಪಾವನರಾಗಿಸಿದ ಗಾನಯೋಗಿ ಸದ್ಗುರು ತ್ಯಾಗರಾಜರು. ರಾಮನಾಮ ಜಪವೊಂದೇ ಈ ನಶ್ವರ ಬದುಕಿನಲ್ಲಿ ನಿರ್ದಿಷ್ಟ ಗುರಿಯನ್ನು ಸಾಧಿಸುವ ಮಾರ್ಗವನ್ನು ತೋರುವ ತಾರಕಮಂತ್ರ ಎಂದು ಜಗತ್ತಿಗೆ ಸಾರಿದ ಮಹಾನುಭಾವರು ಇವರು. ಸದ್ಗುರು ತ್ಯಾಗರಾಜರು ತಮ್ಮ ಇಡೀ ಜೀವನವನ್ನು ಶ್ರೀರಾಮನ ಪಾದಸೇವೆಗೆ, ಅವನನ್ನು ಕುರಿತಾದ ಸಂಗೀತ ಸೇವೆಗೆ ಮುಡಿಪಾಗಿಟ್ಟು ಸಂತರೆನಿಸಿದರು, ಯೋಗಿ ಎನಿಸಿದರು.

ಹೌದು, ಸದ್ಗುರು ತ್ಯಾಗರಾಜರು ಸಂತರೇ ಹೌದು. ಇಹದಲ್ಲಿ ಕೌಟುಂಬಿಕ ಜೀವನದಲ್ಲಿ ವ್ಯಸ್ತರಾಗಿದ್ದರೂ, ಮಾನಸಿಕವಾಗಿ ಅವರು ಸಂತರೇ ಆಗಿದ್ದರು. ಆರಾಧ್ಯದೈವ ಶ್ರೀರಾಮನನ್ನು ಸದಾ ಸ್ಮರಿಸುತ್ತಾ ಸಂತರಂತೆಯೇ ಬಾಳಿದರು.

ತ್ಯಾಗರಾಜರಿಗೆ ಏಕೆ ಈ 'ಸಂತ' ಪಟ್ಟ ಸಂದಿತು? ಇದಕ್ಕೆ ಮುಖ್ಯ ಕಾರಣಗಳು ಎರಡು. ಮೊದಲನೆಯದು, ತಮ್ಮ ಸ್ವಂತ ವಿಷಯದ ಅಭಿವ್ಯಕ್ತಿಯಲ್ಲಿ ಅವರು ನಿರಾಸಕ್ತಿ ಹೊಂದಿದ್ದರು. ಎರಡನೆಯದು, ತಮ್ಮ ಸ್ವಂತ ವಿಷಯದ ಬಗ್ಗೆ ಹೇಳುವುದಕ್ಕಿಂತ ಹೆಚ್ಚಾಗಿ ತಮ್ಮ ಭಕ್ತಿಭಾವಕ್ಕೆ ಅಭಿವ್ಯಕ್ತಿಯನ್ನು ನೀಡುವ ಉದ್ದೇಶವನ್ನು ಅವರು ಹೊಂದಿದ್ದರು. ಹಾಗಾಗಿ ಅವರು ಜನಮಾನಸವನ್ನು ತಲುಪುವಲ್ಲಿ , ತಮ್ಮ ಜೀವಿತದ ಉದ್ದೇಶವನ್ನು ಸಫಲವಾಗಿಸುವಲ್ಲಿ ಯಶಸ್ವಿಯಾದರು.

'ಸುಗುಣ ರಾಮಬ್ರಹ್ಮ ಸುತುಡೈನ ತ್ಯಾಗರಾಜು' ಎಂದು 'ಪ್ರಹ್ಲಾದ ಭಕ್ತಿ ವಿಜಯ'ದ ಆದಿ ದ್ವಿಪದಿಯಲ್ಲಿ ಅವರು ತನ್ನ ತಂದೆ ತಾಯಿಯರನ್ನು ಕುರಿತು ಹೇಳಿದ್ದಾರೆ. ತ್ಯಾಗರಾಜರು ೧೭೬೭ರ ಮೇ ೪ ರಂದು ತಿರುವಾರೂರಿನಲ್ಲಿ ಕಾಕರ್ಲ ವಂಶದ, ಭಾರದ್ವಾಜ ಗೋತ್ರದ, ಆಪಸ್ತಂಭ ಸೂತ್ರದ ಮುಲುಕನಾಡು ತ್ರೈಲಿಂಗ ಬ್ರಾಹ್ಮಣರಾದ ರಾಮಬ್ರಹ್ಮ ಮತ್ತು ಸೀತಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ತ್ಯಾಗರಾಜರ ಅಣ್ಣಂದಿರು



ಪಂಚಾಪಕೇಶ ಮತ್ತು ರಾಮನಾಥ. ರಾಮಬ್ರಹ್ಮರ ತಂದೆ ಗಿರಿರಾಜರು ಒಳ್ಳೆಯ ಪಂಡಿತರು, ಕವಿಗಳು. ಸೀತಮ್ಮನ ತಂದೆ ಕಾಳಹಸ್ತೀಶ ಅಯ್ಯರ್ ವೀಣಾ ವಿದ್ವಾಂಸರು. ರಾಮಬ್ರಹ್ಮರು ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಪಂಡಿತರು, ಹಾಗೂ ರಾಮಾಯಣ ಪ್ರವಚನದಲ್ಲಿ ನಿಷ್ಣಾತರಾಗಿದ್ದರು. ಇವೆಲ್ಲದರ ಫಲವಾಗಿ ತ್ಯಾಗರಾಜರಿಗೆ ಚಿಕ್ಕಂದಿನಿಂದಲೂ ಸಾಹಿತ್ಯ ಸಂಗೀತ ಮತ್ತು ಭಾಷೆಗಳ ಪರಿಚಯವಾಗಿ, ಕ್ರಮೇಣ ಆಸಕ್ತಿ ಹುಟ್ಟಿ, ನಂತರ ಆ ದಿಕ್ಕಿನಲ್ಲಿ ಮುಂದುವರಿಯುವ, ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಅಪೂರ್ವ ಅವಕಾಶ ದೊರೆಯಿತು. ತಂಜಾವೂರಿನ ಆಸ್ಥಾನ ವಿದ್ವಾಂಸರಾಗಿದ್ದ ಸೊಂಟಿ ವೆಂಕಟರಮಣಯ್ಯ ಭಾಗವತರಲ್ಲಿ ಸಂಗೀತ, ಗಣಿತ, ಮಂತ್ರ, ಜ್ಯೋತಿಷ್ಯ ಇವುಗಳ ಕಲಿಕೆ; ತಂದೆ ರಾಮಬ್ರಹ್ಮರಿಂದ ತೆಲುಗು ಮತ್ತು ಸಂಸ್ಕೃತ ಭಾಷೆಗಳ ಅಧ್ಯ



ತನ್ನ ಇಷ್ಟದೇವತೆ ಶ್ರೀರಾಮನ ದರ್ಶನ ಪಡೆಯುತ್ತಿರುವ ತ್ಯಾಗರಾಜರು - ಕಲಾವಿದ ಕಂಡಂತೆ

ಯನ, ಎರಡೂ ತ್ಯಾಗರಾಜರಿಗೆ ಲಭ್ಯವಾದವು. ನಂತರ ರಾಮ ಕೃಷ್ಣ ಯತೀಂದ್ರರೆಂಬ ಭಾಗವತೋತ್ತಮರಿಂದ ರಾಮತಾರಕ ನಾಮ ಉಪದೇಶವಾಯಿತು.

ತ್ಯಾಗರಾಜರ ಆರಾಧ್ಯ ದೈವ ನಾರದರು. ನಾರದ ಶಬ್ದಕ್ಕೆ 'ನಾರ' ಎಂದರೆ ಹರಿಯ ಜ್ಞಾನ, 'ದ' ಎಂದರೆ ನೀಡುವಾತನು ಎಂದು ಒಂದು ಅರ್ಥ. ಇನ್ನೊಂದು, 'ಅರದ' ಅಂದರೆ ದೋಷ ಪ್ರದ, 'ನಾ' ಎಂದರೆ ಇಲ್ಲದವನು, ಅಂದರೆ ದೋಷರಹಿತನಾದ ವನು. 'ನಾರಂ ಜ್ಞಾನ ತಂ ದದಾತೀತಿ ನಾರದಃ', ಹರಿಯ ಜ್ಞಾನ ವನ್ನು ಕೊಡುವವನೇ ನಾರದ.

ನಾರದರೇ ಸಂನ್ಯಾಸಿಯ ವೇಷದಲ್ಲಿ ಬಂದು ತ್ಯಾಗರಾಜರಿಗೆ 'ನಾರದೀಯ' ಮತ್ತು 'ಸ್ವರಾರ್ಣವ' ಎಂಬ ಸಂಗೀತ ಗ್ರಂಥ ಗಳನ್ನು ನೀಡಿ ಅಧ್ಯಯನ ಮಾಡುವಂತೆ ಆದೇಶಿಸಿದರು ಎಂಬ ಪ್ರತೀತಿಯೂ ಇದೆ. ತ್ಯಾಗರಾಜರು ತಮ್ಮ ೨೧ನೇ ವಯಸ್ಸಿಗೇ ೯೬ ಕೋಟಿ ರಾಮನಾಮ ಜಪವನ್ನು ಮುಗಿಸಿದ್ದರು. ಅವರ ಶ್ರದ್ಧಾ ಭಕ್ತಿಯ ಪ್ರತಿರೂಪವಾಗಿ ಪ್ರತಿ ಬಾರಿಯೂ ಕೋಟಿ ರಾಮ ನಾಮ ಜಪದ ಅಂತ್ಯದಲ್ಲಿ ಅವರಿಗೆ ಸೀತಾ ಸಮೇತ ಶ್ರೀ ರಾಮನ ದರ್ಶನವಾಗುತ್ತಿತ್ತಂತೆ, ಅಂತಹ ಪುಣ್ಯವಂತ ಸಂತರು ತ್ಯಾಗ ರಾಜರು.

ತ್ಯಾಗರಾಜರ ಮೊದಲ ಪತ್ನಿ ಪಾರ್ವತಿ. ವಿವಾಹವಾದ ಐದು ವರ್ಷಕ್ಕೆ ಇವರು ತೀರಿಕೊಂಡ ಮೇಲೆ ಅವರ ತಂಗಿ ಕಮಲಾಂಬೆ ಯನ್ನು ವಿವಾಹವಾದರು. ಈ ದಂಪತಿಯ ಮಗಳು ಸೀತಾಲಕ್ಷ್ಮಿ.

ತ್ಯಾಗರಾಜರು ಪ್ರಾಪಂಚಿಕ ವಿಷಯಗಳ ಸಾಗರದಲ್ಲಿ ಮುಳುಗಲಿಲ್ಲ, ಬದಲಾಗಿ ವೈರಾಗ್ಯದಿಂದ ಇದ್ದರು. ಧನಿಕರನ್ನು ಬೇಡಲಿಲ್ಲ , ಮುಖಸ್ತುತಿ ಮಾಡಲಿಲ್ಲ. ಈ ಲೋಕದ ಸಂಪ ತ್ತೆಲ್ಲವೂ ನಶ್ವರ ಎಂದು ತಿಳಿದು ಅದರಂತೆಯೇ ನಡೆದರು. ಬದುಕಿಗಾಗಿ, ಪತ್ನಿಪುತ್ರಿಯ ಸಲುವಾಗಿಯೂ ದುರ್ಮಾರ್ಗ ವನ್ನು ಹಿಡಿಯಲಿಲ್ಲ. ರಾಮನನ್ನು ಕಾಣುವುದು, ಅವನ ಸನ್ನಿಧಿ ಯನ್ನು ಪಡೆಯುವುದು ಅತ್ಯಂತ ಹಿರಿದಾದ ನಿಧಿ ಎಂದು ಮನನ ಮಾಡಿಕೊಳ್ಳುತ್ತಾ ಜಗತ್ತಿಗೂ ಅದನ್ನೇ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿದ್ದರು. 'ನಿಧಿಚಾಲ ಸುಖಮಾ.. ರಾಮುನಿ ಸನ್ನಿಧಿ ಸೇವ ಸುಖಮಾ.. ನಿಜಮುಗ ಬಲ್ಕು ಮನಸಾ...' ಎಂಬ ಕೃತಿ ಯಲ್ಲಿ ಪ್ರಾಪಂಚಿಕ ನಿಧಿಯೋ ಅಥವಾ ರಾಮನ ಸನ್ನಿಧಿಯೋ, ಯಾವುದು ನಿನಗೆ ಸುಖವನ್ನು ನೀಡುತ್ತದೆ ಹೇಳು ಮನಸ್ಸೇ ಎಂದು ಪ್ರಶ್ನಿಸುತ್ತಿದ್ದರು.

ಶರಭೋಜಿ ರಾಜ, ಸ್ವಾತಿ ತಿರುನಾಳ್ ಮಹಾರಾಜರು, ಇಬ್ಬರೂ ಇವರನ್ನು ತಮ್ಮ ತಮ್ಮ ಸ್ಥಾನಗಳಲ್ಲಿ ಆಸ್ಥಾನಕವಿಯಾಗಿರ ಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ತ್ಯಾಗರಾಜರು ಮಾತ್ರ ಒಮ್ಮೆಯೂ ಈ ಇಹಸುಖದ ಲಾಲಸೆಗೆ ತುತ್ತಾಗಲಿಲ್ಲ. 'ಧರಣೀ ಶುಲ ಚೆಲಿಮಿ ಒಕಪದವಾ?' ಮಹಾರಾಜನ ಸ್ನೇಹವೇ ಒಂದು ಉತ್ತಮ ಪದವಿಯೆ? ಎಂದು ಪ್ರಶ್ನಿಸುತ್ತ, ಖಂಡಿತಾ ಇಲ್ಲ ಎಂದು ಪ್ರತಿಪಾದಿಸಿದರು. ತಮ್ಮ ಅನುಭವಗಳ ಮೂಸೆ ಯಲ್ಲಿ ರಚಿತವಾದ ಅವರ ಒಂದೊಂದು ಕೃತಿಯೂ ಅಮರ

ವಾಗಿವೆ, ಸಮಾಜದ ಉದ್ಧಾರಕ್ಕಾಗಿ ದಾರಿದೀಪವಾಗಿವೆ, ಮನುಜನ ಆತ್ಮೋನ್ನತಿಗೆ ಬೆಳಕಾಗಿವೆ.

ಯಾವ ಲೋಭಕ್ಕೂ ಒಳಗಾಗದೆ ತ್ಯಾಗರಾಜರು ಬೀದಿಬೀದಿಗಳಲ್ಲಿ ಉಂಛವೃತ್ತಿ ಮಾಡುತ್ತ, ರಾಮನಾಮ ಸಂಕೀರ್ತನೆ ಮಾಡುತ್ತಾ, ಭಕ್ತರು ನೀಡುತ್ತಿದ್ದ ಪದಾರ್ಥಗಳನ್ನು ತತ್ಕಾಲಕ್ಕೆ ಬೇಕಾದಷ್ಟೇ ಸಂಗ್ರಹಿಸಿ ಸಂಸಾರವನ್ನು ತೂಗಿಸುತ್ತಿದ್ದರು. ಹಾಗೆಯೇ ಶ್ರೀರಾಮನ ಪೂಜೆಯನ್ನೂ ಮಾಡುತ್ತಿದ್ದರು. ವ್ಯಾಮೋಹ ಆಸೆಗಳಿಂದ ವಿಮುಖರಾಗುತ್ತಾ ಭವದಿಂದ ಪರದೆಡೆಗೆ ಸಾಗುವ ಭಕ್ತಿಪಥವನ್ನು ತಾವು ಅನುಸರಿಸುತ್ತ ಎಲ್ಲರಿಗೂ ಸನ್ಮಾರ್ಗ ತೋರಿದರು.

ಇವರ ಈ ನಡವಳಿಕೆ ಸಾಮಾನ್ಯ ಜನರಿಗೆ ವಿಚಿತ್ರ ಎನಿಸಬಹುದೇನೋ, ಅಂತಹ ಅನುಭವವನ್ನೂ ಸಹ ತ್ಯಾಗರಾಜರು ಪಡೆದರು. ಸುತ್ತಮುತ್ತಲಿನವರು ಇವರನ್ನು ಟೀಕಿಸಿದರು, ನಿಂದಿಸಿದರು. ಮೊದಮೊದಲು ತಮ್ಮ ಮಾನಸಿಕ ಕ್ಷೋಭೆಯನ್ನು ತ್ಯಾಗರಾಜರು ಹಲವಾರು ಕೃತಿಗಳಲ್ಲಿ ವ್ಯಕ್ತಪಡಿಸಿದರು.

'ಭವಮು ವೇರುಜೇಸಿತಿ ನನುಚು ನಾದುಪೈ ಬಲಿಕೇರು ನರುಲು...' ಈ ಲೋಕದಲ್ಲಿ ಸಾಮಾನ್ಯರಂತಿಲ್ಲದೆ ಬೇರೆ ಬೇರೆಯಾಗಿ ಜೀವಿತವನ್ನು ನಡೆಸಿದೆ ಎಂದು ನನ್ನ ಬಗೆಗೆ ಜನರು ಮಾತನಾಡುತ್ತಾರೆ ಎಂದರು.

'ಧರಲೋನ ನಾ ಸರಿವಾರಲಲೋ ದಯಜೂಡವಯ್ಯ..' ಈ ರೀತಿಯ ತೊಂದರೆಗಳನ್ನು ಪರಿಹರಿಸಿ ಈ ಲೋಕದಲ್ಲಿ ತಮ್ಮ ಸರಿಸಮಾನರಲ್ಲಿ ಕರುಣೆ ತೋರು ಎಂದು ಭಗವಂತನಲ್ಲಿ ಪ್ರಾರ್ಥಿಸಿದರು. ಕಾಲಕ್ರಮೇಣ ಇವರ ಶಕ್ತಿಯ ಅರಿವು ಜನರಿಗಾಯಿತು. ಟೀಕಿಸುತ್ತಿದ್ದ ಜನರೇ ಆದರಿಸಿದರು, ಗೌರವ ತೋರಿದರು. 'ನೀವಾಡನು ನೇನನಿ ಲೋಕುಲು ಬಲ್ಕೇರುಗಾ ಧನ್ಯುಡನೈತಿ...' - ಲೋಕದ ಜನರು ನನ್ನನ್ನು ನಿನ್ನವನೆಂದು ಹೇಳಿದರಲ್ಲ ನಾನು ಧನ್ಯನಾದೆ ಎಂದು ಕೃತಜ್ಞತೆಯನ್ನು ಸೂಚಿಸಿದರು.

ಮಹಾರಾಜರುಗಳ ಆಹ್ವಾನವನ್ನು ಮನ್ನಿಸಿದ್ದರೆ ತ್ಯಾಗರಾಜರಿಗೆ ಒಳ್ಳೆಯ ಸ್ಥಾನ ಸಿಗುತ್ತಿತ್ತು, ಪ್ರಾಪಂಚಿಕವಾಗಿ ಸುಖವಾಗಿರಬಹುದಿತ್ತು ಎಂಬ ಕಲ್ಪನೆ ತ್ಯಾಗರಾಜರ ಅಣ್ಣಂದಿರಿಗಿತ್ತು. ಆದರೆ ತ್ಯಾಗರಾಜರು ಅದನ್ನು ಒಪ್ಪದಿದ್ದ ಕಾರಣ ಅಣ್ಣ ತಮ್ಮಂದಿರಲ್ಲಿ ಭಿನ್ನಾಭಿಪ್ರಾಯ ಮೂಡಿತು, ಕಲಹಕ್ಕೆ ನಾಂದಿ ಆಯಿತು, ಆಸ್ತಿ ವಿಭಾಗಕ್ಕೂ ದಾರಿ ಮಾಡಿತು. ಆಗ ಕೋಪಗೊಂಡ ಅವರ ಅಣ್ಣನೊಬ್ಬ ತ್ಯಾಗರಾಜರು ಪೂಜಿಸುತ್ತಿದ್ದ ರಾಮನ ವಿಗ್ರಹಗಳನ್ನು ನದಿಗೆ ಎಸೆದನೆಂಬ ಪ್ರತೀತಿ ಇದ್ದರೂ, ನಿಜವಾದ ಅರ್ಥದಲ್ಲಿ ತ್ಯಾಗರಾಜರ ಅಣ್ಣ ಅಂತಹ ಅವಿವೇಕಿಯಾಗಿರುವುದಿಲ್ಲ, ಅಂತಹ ತಾಯಿ-ತಂದೆಯ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ವ್ಯಕ್ತಿ ಈ ರೀತಿ ಕೆಳಮಟ್ಟದ ಆಲೋಚನೆ ಮಾಡಲಾರ ಎಂದು ವಿವೇಚಿಸಬಹುದು.

ಆದರೆ ರಾಮನ ವಿಗ್ರಹಗಳು ಕಣ್ಮರೆಯಾದ ಅವಧಿಯಲ್ಲಿ ತೀವ್ರ ವೇದನೆಯನ್ನು ಅನುಭವಿಸಿದರು ತ್ಯಾಗರಾಜರು. ಆ ಸಮಯದಲ್ಲಿ ಅವರು ರಚಿಸಿದ ಹಾಡುಗಳು ನೂರಾರು. ಅವರ ನಿಶ್ಚಲ ಭಕ್ತಿಯಲ್ಲಿ ಮಿಂದ ಶ್ರೀರಾಮನು ಆನಂದಿತನಾಗಿ, ಅವರ ಕನಸಿನಲ್ಲಿ ಬಂದು ವಿಗ್ರಹಗಳು ಇರುವ ಸ್ಥಳವನ್ನು ತಿಳಿಸಿದನು. ನಂತರ ವಿಗ್ರಹಗಳು ಲಭ್ಯವಾದ ಕ್ಷಣದ ಸಂತೋಷದಲ್ಲಿ, 'ಕನುಗೊಂಟಿನಿ ಕನುಗೊಂಟಿನಿ ಶ್ರೀರಾಮುನಿ ನೇಡು..' - ಶ್ರೀ ರಾಮನನ್ನು ನೋಡಿದೆ ನೋಡಿದೆ ಎಂದು ಉನ್ಮಾದದಲ್ಲಿ ಹಾಡಿದರು.

ತ್ಯಾಗರಾಜರ ಸಂಗೀತ ಸಾಹಿತ್ಯಗಳು ಧಾತು-ಮಾತುಗಳಿಂದ ವಿಶಿಷ್ಟವಾಗಿರುವ ಶಿಷ್ಟ ಸಂಗೀತದ ಗೇಯ ರಚನಾ ಪ್ರಕಾರಗಳು. 'ನಾನೃಷಿಃ ಕುರುತೇ ಕಾವ್ಯಂ' ಎನ್ನುವಂತೆ ಋಷಿ ಅಲ್ಲದವನು ಕಾವ್ಯಸೃಷ್ಟಿ ಮಾಡಲಾರ. ತ್ಯಾಗರಾಜರು ಮಾಡಿದ ಹಾಡಿದ ಹಾಡುಗಳೆಲ್ಲ ರಾಮಮಯವಾಗಿ, ವಾಲ್ಮೀಕಿ ರಾಮಾಯಣದಷ್ಟೇ ಪವಿತ್ರವಾಗಿವೆ. ಅಧ್ಯಾತ್ಮ ಸಾಧನೆಗೆ ಒಬ್ಬ ವ್ಯಕ್ತಿಯಲ್ಲಿ ಇರಬೇಕಾದ ಧರ್ಮನಿಷ್ಠೆ, ಭಕ್ತಿಪ್ರಚಾರ, ಅನುಸಂಧಾನಗಳು ಎಲ್ಲವೂ ಸಾರ್ವತ್ರಿಕವಾಗಿ ಪ್ರಚಾರಗೊಳ್ಳಬೇಕಾದ ಗುಣಗಳು. ಆದರ್ಶ, ಲೋಕನೀತಿ, ಉದಾತ್ತ ಭಾವನೆ, ಯಮಕಗಳು, ಗಾದೆಗಳು, ಲೋಕೋಕ್ತಿಗಳು, ಪ್ರಾಸ-ಅನುಪ್ರಾಸಗಳು, ಸಂಗತಿಗಳು, ಎಲ್ಲವೂ ಇವರ ಕೃತಿಗಳ ಹೆಗ್ಗಳಿಕೆಗಳು.

ತ್ಯಾಗರಾಜರು 'ನಮೋ ನಮೋ ರಾಘವಾಯ' ಎಂಬ ಸರಳವಾದ ರಾಮಸ್ತುತಿಯಿಂದ ತಮ್ಮ ಕವಿಜೀವನವನ್ನು ಆರಂಭಿಸಿದರು. 'ಜಾತಿಕೊಕರು ಕೂಡಿನಾರಮು ಪ್ರೀತಿಚೇತ ದೆಲುಸುಕೊಂಟಿಮಿ ನಾಮಸಾರಮು' ಎನ್ನುವಂತೆ, ಜಾತಿ ಮತ ಭೇದವಿಲ್ಲದೆ ಎಲ್ಲರೂ ಸೇರಿ ನಾಮಸಂಕೀರ್ತನೆ ಮಾಡಿ ಅದರ ಫಲವನ್ನು ಅನುಭವಿಸಬಹುದೆಂಬ ಸಲಹೆ ನೀಡುವ ಹಲವಾರು ಕೃತಿಗಳಿವೆ.

ಘನರಾಗ ಪಂಚರತ್ನ ಕೃತಿಗಳು, ದಿವ್ಯ ನಾಮ ಸಂಕೀರ್ತನೆಗಳು, ಉತ್ಸವ ಸಂಪ್ರದಾಯ ಕೃತಿಗಳು, ಸಮುದಾಯ ಕೃತಿಗಳು, ಕ್ಷೇತ್ರ ಕೃತಿಗಳು, ಸಂಗೀತ ನಾಟಕಗಳು, ಹೀಗೆ ಸಂಗೀತ ಪದ್ಧತಿಯಲ್ಲಿ ಹಲವಾರು ಪ್ರಕಾರಗಳನ್ನು ರಚಿಸಿ ಕರ್ನಾಟಕ ಸಂಗೀತಕ್ಕೆ ಒಂದು ಭದ್ರಬುನಾದಿಯನ್ನು, ಒಂದು ಹೆಮ್ಮೆಯ ಚರಿತ್ರೆಯನ್ನು ಹುಟ್ಟು ಹಾಕಿದವರು ತ್ಯಾಗರಾಜರು. ಇವರ ಶೈಲಿಯನ್ನು ದ್ರಾಕ್ಷಾಪಾಕಕ್ಕೆ ಹೋಲಿಸಿರುವುದುಂಟು.

ಭಕ್ತಿಸಂಗೀತವೇ ಭಗವತ್ ದರ್ಶನಕ್ಕೆ ಸೂಕ್ತವಾದ ಮಾರ್ಗ ಎಂದು ತ್ಯಾಗರಾಜರು ಪ್ರತಿಯೊಂದು ಹೆಜ್ಜೆಯಲ್ಲೂ ಮನನ ಮಾಡಿಸುತ್ತಾರೆ. ವ್ರತಗಳನ್ನು ಆಚರಿಸದಿದ್ದರೂ ಸತ್ಸಂಗದ ಸಹವಾಸದಿಂದ ಬ್ರಹ್ಮಾನುಭವವನ್ನು ಹೊಂದಬಹುದೆಂಬ ಪ್ರತಿಪಾದನೆ ಮಾಡುತ್ತಾರೆ. ಭಗವಂತನಲ್ಲಿ ಪರಮ ಪ್ರೀತಿ ಮತ್ತು ಅನನ್ಯ ಶರಣಾಗತಿ, ಇವೆರಡೇ ಭಗವಂತನ ಅನುಗ್ರಹ ಪ್ರಾಪ್ತಿಗೆ

ಸಾಧನಗಳು. ತ್ಯಾಗರಾಜರು ದೇವರ ಅಸ್ತಿತ್ವವನ್ನು ಮೂರು ಹಂತಗಳಲ್ಲಿ ಸಮರ್ಥಿಸುತ್ತಾರೆ. ನಂಬಿಕೆಯ ಹಂತ, ವಿಚಾರದ ಹಂತ, ಶ್ರುತಿಯ ಹಂತ. ಇವರ ಔನ್ನತ್ಯದ ಹಿರಿಮೆಯಿಂದ ಇವರು ನಾರದಾಂಶ ಸಂಭೂತರೆಂದು ಕೆಲವರು ನಂಬಿದರು.

'ಕದ್ದನು ವಾರಿಕಿ' ಕದ್ದು ಕೃತಿಯಲ್ಲಿ ನಂಬಿಕೆಯ ಅಗತ್ಯವನ್ನು ಒತ್ತಿ ಹೇಳುತ್ತಾರೆ. 'ನೀವುಲೇಕ ಯೇ ತನುವಲು ನಿರತ ಮುಗಾ ನಡಚುನು' ಎಂದು ವಿಚಾರವಾದವನ್ನು ಮಂಡಿಸುತ್ತಾರೆ. 'ಆಕಾಶ ಶರೀರಮು ಬ್ರಹ್ಮಮುನೆ' – ಆಕಾಶವೇ ಭಗವಂತನ ಶರೀರವೆಂದು ವರ್ಣಿಸುತ್ತಾರೆ. 'ಜ್ಞಾನಮೊಸಗರಾದ' ಎಂಬ ಕೃತಿ ಯಲ್ಲಿ ತಾತ್ತ್ವಿಕ ಐಕ್ಯತೆಯ ಸಾಕ್ಷಾತ್ಕಾರದ ಪ್ರತೀಕವನ್ನು ಪ್ರತಿ ಪಾದಿಸುತ್ತಾರೆ. ಶ್ರೀರಾಮನು ತ್ಯಾಗರಾಜರ ಜೀವಾಧಾರ, ಅವರಲ್ಲಿ ಅಂತರ್ಯಾಮಿಯಾಗಿದ್ದು ಅವರ ಇಂದ್ರಿಯಗಳನ್ನು ಪ್ರೇರೇಪಿಸುವವನು. ಹಾಗೆಂದೇ 'ನಾ ಜೀವಾಧಾರ ನಾ ಚೂಪು ಪ್ರಕಾಶಮಾ ನಾ ನಾಸಿಕ ಪರಿಮಳಮ' ಎಂದು ಹಾಡುತ್ತಾರೆ.

ಶ್ರೀರಾಮನ ಸೌಂದರ್ಯವನ್ನು ವರ್ಣಿಸಲು ತ್ಯಾಗರಾಜ ರಿಗೆ ಪದಗಳೇ ಸಾಲದು. ಜಗತ್ತಿನಲ್ಲಿ ನಾವು ವಸ್ತುವೊಂದರ ಸೌಂದರ್ಯದಿಂದ ಅದನ್ನು ಪ್ರೀತಿಸುತ್ತೇವೆ. ವೇದಾಂತದ ಈ ಗಹನವಾದ ಅಂಶವನ್ನು ತ್ಯಾಗರಾಜರು ಬಹು ಸ್ವಾರಸ್ಯವಾಗಿ ರಾಮಾಯಣದ ಉದಾಹರಣೆಯೊಂದಿಗೆ ಮಂಡಿಸುತ್ತಾರೆ. ಪ್ರತಿ ಭಕ್ತನಿಗೂ ಭಗವಂತನ ದಿವ್ಯ ಸಾಕಾರದ ಒಂದೊಂದು ಅಂಶದಲ್ಲಿ ಆಕರ್ಷಣೆ. ಆತನ ಸೌಂದರ್ಯದಲ್ಲಿ ಸೀತೆಗೆ, ಓರೆನೋಟದಲ್ಲಿ ಲಕ್ಷ್ಮಣನಿಗೆ, ಸುಂದರ ಮುಖದಲ್ಲಿ ಭರತನಿಗೆ, ಸುಜ್ಞಾನ ರೂಪದಲ್ಲಿ ಶತ್ರುಘ್ನನಿಗೆ, ಪಾದಾರವಿಂದಗಳಲ್ಲಿ ಆಂಜನೇಯ ನಿಗೆ, ದಿವ್ಯ ಸುಖವುಂಟು. ಕ್ಷೀರಸಾಗರ ವಿಹಾರ, ಸೊಗಸು ಜೂಡ ತರಮಾ, ರಘುಕುಲ ಜಲನಿಧಿ, ಮರವಕುರಾ, ಲೇಕನಾ ನಿನ್ನು ಜುಟ್ಟುಕೊನ್ನಾರು ಹೀಗೆಲ್ಲ ಕೃತಿಗಳಲ್ಲಿ ವರ್ಣಿಸುತ್ತಾರೆ.

ಶ್ರುತಿ–ಲಯ–ಸ್ವರಶುದ್ಧಿಗಳೊಂದಿಗೆ ಸಂಕೀರ್ತನೆ ಮಾಡು ವುದು ಆಹ್ಲಾದಕಾರಿಯೂ ಹೌದು ಎಂಬುದನ್ನು ಮನದಟ್ಟು ಮಾಡುವ ಮೂಲಕ ಭಜನಾ ಪದ್ಧತಿಗೆ ವಿಶಿಷ್ಟ ರೂಪವನ್ನು ಕೊಟ್ಟರು ತ್ಯಾಗರಾಜರು.

ಸಂನ್ಯಾಸದ ಚಿತ್ರಣವನ್ನು ತ್ಯಾಗರಾಜರು ಮನೋಜ್ಞವಾಗಿ ವಿವರಿಸುತ್ತಾರೆ. ಅವರ ಪ್ರಕಾರ ಸಂನ್ಯಾಸವೆಂದರೆ ಪ್ರವೃತ್ತಿ, ನಿವೃತ್ತಿ ಮಾರ್ಗಗಳಿಗೆ ಮಧ್ಯೆ ಇರುವ ಸುವರ್ಣ ಮಾಧ್ಯಮ. ಎಂದರೆ, ಸಂಸಾರಿಯು ತನ್ನ ಕರ್ತವ್ಯವನ್ನು ಮಾಡಿ ಅದರ ಫಲ ವನ್ನು ದೇವರಿಗೆ ಅರ್ಪಿಸಿ, ತನ್ನ ಸತಿ ಸುತರನ್ನು ಭಗವತ್ ಸೇವೆ ಯಲ್ಲಿ ತೊಡಗಿಸಬೇಕೆಂಬುದು ಅವರ ಬೋಧನೆ. ದೇವರನ್ನು ಕುರಿತ ಶಾಸ್ತ್ರಜ್ಞಾನವೇ ಜ್ಞಾನಯೋಗ. ಇದರಲ್ಲಿ ಶ್ರವಣ, ಮನನ ಮತ್ತು ನಿದಿಧ್ಯಾಸನಗಳೆಂಬ ಮೂರು ಹಂತಗಳುಂಟು.

ಆಚಾರ್ಯ ಶಂಕರರ ಪ್ರಕಾರ ಭಕ್ತಿಯು ಜ್ಞಾನದ ಒಂದು ಪ್ರಕಾರ. ಉತ್ತಮವೂ ಪರಮಾತ್ಮ ಜ್ಞಾನದಿಂದ ಕೂಡಿರುವುದೂ ಆದ ಭಕ್ತಿಯನ್ನು ಯಾರು ಆಶ್ರಯಿಸುತ್ತಾರೋ ಅವರೇ ಭಕ್ತರು. ಭಕ್ತಿಯ ಮೂರು ಮುಖ್ಯ ಅಂಶಗಳೆಂದರೆ ಅಸಾಧಾರಣತೆ, ಏಕಾಗ್ರತೆ ಮತ್ತು ಪ್ರೀತಿ. ಹಾಗಾಗಿ ತ್ಯಾಗರಾಜರು 'ಭಕ್ತಿಯನೇ ಚಕ್ಕನಿ ಮಾರ್ಗಮುಲುಂಡಗ ಸಂದುಲತೂರನೇಲ?' ಭಕ್ತಿಯು ಒಂದು ರಾಜಮಾರ್ಗ, ಇದೇ ಉಪಲಬ್ಧವಾಗಿರುವಾಗ ಬೇರೆ ಮಾರ್ಗಗಳ ಸಂದಿಯಲ್ಲಿ ತೂರುವುದೇಕೆ ಎಂದು ಪ್ರಶ್ನಿಸುತ್ತಾರೆ.

ಭಕ್ತಿಯು ಮನುಷ್ಯನನ್ನು ಸಂಸಾರದಿಂದ ರಕ್ಷಿಸಿ ಅವನಿಗೆ ಮೋಕ್ಷವನ್ನು ದೊರಕಿಸಿಕೊಡುತ್ತದೆ. ಆ ರೀತಿಯಲ್ಲಿ ಭಕ್ತನ ಭಾವನೆ ಗಳೆಲ್ಲವೂ ದೇವರೆಡೆಗೆ ಹರಿದು, ಅಲ್ಲಿಯೇ ತನ್ಮಯವಾಗಿ ನಿಗ್ರಹವು ತಾನಾಗಿಯೇ ಸಿದ್ಧಿಸುತ್ತದೆ. 'ರಾರಾ ಸೀತಾರಾಮ' ಕೃತಿಯಲ್ಲಿ 'ಯೋಗಮು ನೀಪೈ ಯನುರಾಗಮು ಬಾಡೆದ' ಎಂದರೆ ಯೋಗ ಎಂದರೆ ಭಗವಂತ, ಯೋಗ ಎಂದರೆ ಏಕಾ ಗ್ರತೆ, ಅನುರಾಗ ಎಂದರೆ ಪ್ರೀತಿ – ಹೀಗೆ ಹಾಡಿದ್ದಾರೆ.

ನಾರದರು ತಮ್ಮ ಭಕ್ತಿಸೂತ್ರದಲ್ಲಿ ೧೧ ವಿಧದ ಭಕ್ತಿಗಳನ್ನು ಗುರುತಿಸಿದ್ದಾರೆ. ಗುಣಮಾಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾ ಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾಂತಾ ಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯತಾಸಕ್ತಿ, ಪರಮವಿರಹಾ ಸಕ್ತಿ.... ಈ ೧೧ ವಿಧಗಳಿಗೆ ಅನುಗುಣವಾಗಿ ೧೧ ವಿಧದ ಭಕ್ತ ರನ್ನು ಕಾಣಬಹುದು ಅಥವಾ ಒಬ್ಬನೇ ಭಕ್ತನಲ್ಲಿ ಈ ಎಲ್ಲಾ ೧೧ ಭಕ್ತಿಗಳೂ ಒಳಗೊಂಡಿರಬಹುದು. ತ್ಯಾಗರಾಜರು ಈ ಭಕ್ತಿ ಪಂಥಕ್ಕೆ ತಕ್ಕ ಅಭಿವ್ಯಕ್ತಿಗಳನ್ನು ನೀಡಿದ್ದಾರೆ.

ಈ ಭಕ್ತಿ ವೈವಿಧ್ಯತೆಯಂತೆಯೇ ಪಂಚ ಭಾವಗಳಾದ ಶಾಂತ, ದಾಸ್ಯ, ಸಖ್ಯ, ಮಧುರ ಮತ್ತು ವಾತ್ಸಲ್ಯ ಗುಣಗಳು ಭಗವಂತನ ಆರಾಧನೆಗೆ ಪ್ರಚೋದಿಸುವ ಮುಖ್ಯ ಅಂಶಗಳು. ಭಕ್ತಿಯ ಗುರಿ ಯೇ ಮೋಕ್ಷ ಅಥವಾ ಕೈವಲ್ಯ ಅಥವಾ ಮುಕ್ತಿ. ಮುಕ್ತಿಯಲ್ಲಿ ನಾಲ್ಕು ಮಜಲುಗಳು. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಹಾಗೂ ಸಾಯುಜ್ಯ. ಸಾಲೋಕ್ಯದಲ್ಲಿ ಜೀವಿಯು ಮೃತನಾಗು ತ್ತಾನೆ. ಸಾಮೀಪ್ಯದಲ್ಲಿ ಅವನು ದೇವರ ಹತ್ತಿರಕ್ಕೆ ಬರುತ್ತಾನೆ. ಸಾರೂಪ್ಯದಲ್ಲಿ ಜೀವನು ದೇವರ ಆಕಾರವನ್ನೇ ಪಡೆಯುತ್ತಾನೆ. ಸಾಯುಜ್ಯದಲ್ಲಿ ಎರಡು ರೀತಿ ಇವೆ, ಬ್ರಹ್ಮನಲ್ಲಿ ಒಂದಾಗು ವುದು ಒಂದಾದರೆ, ಬ್ರಹ್ಮನಲ್ಲಿ ಒಂದಾದರೂ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವುದು ಇನ್ನೊಂದು. ಈ ಎಲ್ಲಾ ಅಂಶಗಳನ್ನೂ ಒಳಗೊಂಡ ಭಕ್ತಿಯಿಂದ ಕೂಡಿದ ಭಗವಂತನ ಆರಾಧನೆಯು ಮುಕ್ತಿಪಥಕ್ಕೆ ಕೊಂಡೊಯ್ಯುವುದೆಂದು ತ್ಯಾಗರಾಜರು ಪ್ರತಿ ಪಾದಿಸುತ್ತಾರೆ.

ಮತಿಹೀನರು, ಅತಿಪಾಪಿಗಳು, ಸಂಸಾರಿಗಳೂ ಸಹ ಮಹಾತ್ಮರ ಸಂಗದಿಂದ ಸದ್ಗತಿ ಪಡೆಯಬಹುದೆಂಬ, ಸತ್ಸಹವಾಸದಿಂದ ಒಬ್ಬನು ಸನ್ಮಾರ್ಗಕ್ಕೆ ಬಂದು ಧನ್ಯನಾಗುತ್ತಾನೆಂಬ ಅವರ ನಿಲುವು ದೃಢವಾದದ್ದು. ಸಂಸಾರದಲ್ಲಿ ಇದ್ದುಕೊಂಡೂ ಸಾಧನೆ ಮಾಡಬಹುದೆಂಬ ಅರಿವನ್ನು ಅವರು ಮನದಟ್ಟು ಮಾಡುತ್ತಾರೆ. ಸಾಮಾನ್ಯ ಭಾಷೆಗೆ ನಿಲುಕದ ನಾದರೂಪಿಯಾದ ಭಗವಂತನನ್ನು ಸಂಗೀತದ ಮಾಧ್ಯಮದ ಮೂಲಕ ಸಾಕ್ಷಾತ್ಕರಿಸಿಕೊಳ್ಳಬಹುದು ಎಂಬುದನ್ನು ತ್ಯಾಗರಾಜರು ಅರ್ಥೈಸಿದ್ದಾರೆ. ಅವರ ರಚನೆಗಳಲ್ಲಿ ಭಕ್ತಿಯು ಕೇಂದ್ರಬಿಂದುವಾಗಿದ್ದರೂ, ಅವಲೋಕಿಸಿದಾಗ ಅವುಗಳಲ್ಲಿ ಸಾಮಾಜಿಕ ಅಂಶಗಳೂ ಕಂಡುಬರುತ್ತವೆ. ಅವರ ಪ್ರಕಾರ ನಿರ್ಗುಣನಾದ ಭಗವಂತನು ತನ್ನ ಭಕ್ತರ ಆಶಯಗಳಿಗೆ ಅನುಗುಣವಾಗಿ ಆಕಾರ ಪಡೆಯುತ್ತಾನೆ.

ತ್ಯಾಗರಾಜರ ಪ್ರಕಾರ ದೇವರು ಭಕ್ತಸುಲಭನೂ ಹೌದು. ಭಗವಂತನ ಸೌಂದರ್ಯವು ಮಾನವನ ಇಂದ್ರಿಯಗಳಿಗೆ ಹಿತಕಾರಿಯೂ ಹೌದು; ಅವನನ್ನು ಅಧ್ಯಾತ್ಮದ ಉನ್ನತಿಗೆ ಏರಿಸುವ ಸಾಧನವೂ ಹೌದು. ಹಾಗಾಗಿಯೇ ತ್ಯಾಗರಾಜರಿಗೆ ಶ್ರೀರಾಮನನ್ನು ಎಷ್ಟು ವರ್ಣಿಸಿದರೂ ತೃಪ್ತಿಯಿಲ್ಲ. ಪ್ರೇಮ, ಪ್ರೀತಿ, ವಿರಹ, ಆತ್ಮನಿವೇದನೆ, ನಿಂದೆ – ಹೀಗೆ ಹತ್ತು ಹಲವಾರು ರೀತಿಯಲ್ಲಿ , ರಾಗದ ಹಲವಾರು ಭಾವಗಳಲ್ಲಿ ತ್ಯಾಗರಾಜರು ಭಗವಂತನನ್ನು ಸ್ತುತಿಸಿದ್ದಾರೆ. ಭಕ್ತಿಯ ಪರಾಕಾಷ್ಠತೆಗೆ ಕೊಂಡೊಯ್ಯುವ ಕೃತಿಗಳನ್ನೂ ಅವರು ರಚಿಸಿದ್ದಾರೆ.

ತತ್ತ್ವಜ್ಞಾನಿಯಾಗಿ, ತ್ಯಾಗಿಯಾಗಿ, ಸಂತರಾಗಿ ಬಾಳಿದ ತ್ಯಾಗರಾಜರು ತಮ್ಮ ಜೀವಿತದ ಕೊನೆಯ ಕಾಲದಲ್ಲಿ ಸಂನ್ಯಾಸವನ್ನು ಸ್ವೀಕರಿಸಿ 'ನಾದಬ್ರಹ್ಮಾನಂದ' ಎನಿಸಿದರು. ಪುಷ್ಯ ಬಹುಳ ಪಂಚಮಿ ೧೮೪೭ರ ಜನವರಿ ೬ರಂದು ಅವರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿದರು. ಅವರ ದೇಹವನ್ನು ಸಕಲ ಗೌರವಗಳೊಂದಿಗೆ ತಿರುವೈಯಾರಿನ ಕಾವೇರಿ ತೀರದಲ್ಲಿ ಅವರ ಗುರು ಸೊಂಟಿ ವೆಂಕಟರಮಣಯ್ಯ ಅವರ ಸಮಾಧಿಯ ಪಕ್ಕದಲ್ಲಿ ಸಮಾಧಿ ಮಾಡಲಾಯಿತು.

ತ್ಯಾಗರಾಜರು ಕಂಠದಲ್ಲಿ ಯಾವಾಗಲೂ ತುಳಸಿ ಮಾಲೆಯನ್ನು ಧರಿಸುತ್ತಿದ್ದರು. ಇವರ ಕೃತಿಗಳು ಸಂಗೀತಶಾಸ್ತ್ರ ಜ್ಞಾನ ಭಂಡಾರದ ಅಣಿಮುತ್ತುಗಳು. ಅವರ ಕೃತಿಗಳಲ್ಲಿ ಅಡಗಿರುವ ಆಧ್ಯಾತ್ಮಿಕ ರಹಸ್ಯ, ವೇದೋಪನಿಷತ್ತುಗಳ ಗೂಢತೆ, ಮನೋಜ್ಞವಾದ ಸಾಹಿತ್ಯ, ಅನೂಚಾನವಾದ ಧಾಟಿ, ಮನ ಮುಟ್ಟುವ ನಿರೂಪಣೆಗಳೇ ಇದಕ್ಕೆ ಕಾರಣ. ಎಲ್ಲಕ್ಕೂ ಮಿಗಿಲಾಗಿ ಅವರ ಕೃತಿಗಳು ಶ್ರೀರಾಮನ ಪಾದಾರವಿಂದಗಳಲ್ಲಿ ಅರ್ಪಿಸಲ್ಪಟ್ಟ ಭಕ್ತಿದ್ಯೋತಕ ಪುಷ್ಪಗಳಾಗಿವೆ.

'ಸೊಗಸುಗಾ ಮೃದಂಗತಾಳಮು', 'ರಾಗಸುಧಾರಸ', 'ಸಂಗೀತ ಜ್ಞಾನಮು ಭಕ್ತಿ ವಿನಾ', 'ಮೋಕ್ಷಮು ಗಲದಾ', 'ನಾದೋಪಾಸನ..' ಹೀಗೆ ಹಲವಾರು ಕೃತಿಗಳಲ್ಲಿ ನಾದೋಪಾಸನೆಯಿಂದ ಮೋಕ್ಷಸಾಧನೆಯು ಸಾಧ್ಯ ಎಂದು ನಿರೂಪಿಸಿದ್ದಾರೆ. ಇವರು ಭಗವತ್ ಸಾಕ್ಷಾತ್ಕಾರಕ್ಕೆ ಅಳವಡಿಸಿಕೊಂಡ ಅದ್ವಿತೀಯ ಮಾಧ್ಯಮ ನಾದಯೋಗ. ಇವರ ಸಮಸ್ತ ಕಾವ್ಯಗಳು ಗೀತೆಗಳು ಶಬ್ದದ ಸಾಕಾರರೂಪವೇ ಆಗಿರುವ ವಿಷ್ಣುವಿನ ಅಂಶವಾಗಿವೆ. ಪ್ರತಿಯೊಂದು ಶಬ್ದಕ್ಕೂ ಪಾರಮಾರ್ಥಿಕ ಅರ್ಥ ಉಂಟು. ಅವರ ಪ್ರಕಾರ ಭಗವಂತನು ನಾದಾತ್ಮ, ನಾದ ಸ್ವರೂಪಿ, ನಾದಲೋಲ, ನಾದಶರೀರಿ ಮತ್ತು ನಾದಮಯ ಪ್ರಾಣ.

ತಿರುವೈಯಾರಿನ ತ್ಯಾಗರಾಜ ಸಮಾಧಿಯು ಬಹು ಪವಿತ್ರವಾಗಿದೆ. ಬೆಂಗಳೂರು ನಾಗರತ್ನಮ್ಮನವರು ತಮ್ಮ ಸರ್ವಸ್ವವನ್ನೂ ವಿನಿಯೋಗಿಸಿ ಈ ಸಮಾಧಿಯ ಮೇಲೆ ೧೯೫೨ರಲ್ಲಿ ಸುಂದರವಾದ ದೇವಾಲಯವನ್ನು ಕಟ್ಟಿಸಿ ಅಮರ ಕೀರ್ತಿಯನ್ನು ಗಳಿಸಿದರು. ಅವರು ಪ್ರಾರಂಭಿಸಿದ ತ್ಯಾಗರಾಜ ಆರಾಧನೆ ಈ ನಾಡಿನ ಅತ್ಯಂತ ಪವಿತ್ರವಾದ ನಾಡಹಬ್ಬ. ಪುಷ್ಯ ಬಹುಳ ಪಂಚಮಿಯಂದು ತ್ಯಾಗರಾಜರ ಪಂಚರತ್ನ ಕೃತಿಗಳನ್ನು ನಾಡಿನ ಸಮಸ್ತ ಗಾಯಕರೂ ಕೂಡಿ ಹಾಡಿ, ತಿರುವೈಯ್ಯಾರಿನ ಕಾವೇರಿ ತೀರದಲ್ಲಿ ಪ್ರತಿವರ್ಷವೂ ನಡೆಸುವ ಮಹಾ ಉತ್ಸವವು ಅತ್ಯಂತ ದೈವಿಕವಾದ ಅನುಭವವನ್ನು ನೀಡುತ್ತದೆ.

ಭಕ್ತಿಯುಕ್ತವಾದ ಸಂಗೀತದಿಂದ ಮೋಕ್ಷವನ್ನು ಸಾಧಿಸಬಹುದೆಂದು ತೋರಿಸಿದವರು ಶ್ರೀ ತ್ಯಾಗರಾಜರು. ತಮ್ಮ ಆರಾಧ್ಯ ದೈವ ಶ್ರೀರಾಮನ ಮೇಲಿನ ಅಚಂಚಲ ಭಕ್ತಿಯೇ ತಮ್ಮನ್ನು, ಹಾಗೆಯೇ ಸಮಾಜವನ್ನು ಮುಕ್ತಿಯ ಪಥದೆಡೆಗೆ ಕೊಂಡೊಯ್ಯುತ್ತದೆ ಎಂಬ ಅಚಲ ನಂಬಿಕೆ ಮತ್ತು ಶ್ರದ್ಧೆ ಇವರದು. ಹಾಗಾಗಿ ಸಮಾಜ ಸುಧಾರಣೆಗೂ ತಮ್ಮ ಸಂಗೀತದ ಮೂಲಕ ಶ್ರಮಿಸಿದ ಇವರು ಸಂತರಂತೆಯೇ ಬಾಳಿದರು, ಬದುಕಿದರು, ಎಲ್ಲರಿಗೂ ಆದರ್ಶಪ್ರಾಯವಾಗಿ ನಿರಂತರವೂ ಉಳಿದರು.

ಸಂಗೀತ ಕಲಾನಿಧಿ ಟಿ. ವಿ. ಸುಬ್ಬರಾವ್ ಹೇಳುತ್ತಾರೆ :

'Thyagaraja has been elevated to the status of a Saint. He continues to flourish, immortalised in his own songs and in his bhakthi, to his god RAMA.'

*ಗ್ರಂಥ ಋಣ :*

*೧. **ಶ್ರೀ ತ್ಯಾಗರಾಜರ ಕೃತಿಗಳಲ್ಲಿ ಸಂಗೀತ ಮತ್ತು ಭಕ್ತಿ** – ಒಂದು ಅಧ್ಯಯನ – ಡಾ. ಟಿ. ಎಸ್. ಪದ್ಮ.*

*೨. **ಕರ್ನಾಟಕ ಸಂಗೀತ ಶಾಸ್ತ್ರವಾಹಿನಿ** – ವಿದುಷಿ ಆರ್. ವಸಂತಲಕ್ಷ್ಮಿ.*

*೩. **ಗಾನಬ್ರಹ್ಮ ಶ್ರೀ ತ್ಯಾಗರಾಜ**– ವಿದುಷಿ ಎನ್. ಶಾರದಾ.*